ಪಿಡಬ್ಲ್ಯೂ -1

ಇಂದು ದಿ. 24-07-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧೀಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಅರ್ಜಿಯ ಜೊತೆ ನನ್ನ ಜಾಗಕ್ಕೆ ಸಂಬಂಧಿಸಿದ ಸರ್ವೆ ನಂ.12/7, 4/1 ಎ, ಓಬಜ್ಜಿಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.1 ಮತ್ತು 2 ಎಂದು, ಉಪನೋಂದಣಾಧಿಕಾರಿಗಳು ದಾವಣಗೆರೆ ಇವರು ನೀಡಿದ ಮಾರುಕಟ್ಟೆ ಮೌಲ್ಯ ದರ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಈ ದಾಖಲೆಗಳ ಆಧಾರದ ಮೇಲಿಂದ ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿಯಿರುತ್ತದೆ.

ಪಾಟೀಸವಾಲುಃ - ಎದುರುದಾರರ ಪರ ವಕೀಲರಿಂದಃ

ನನ್ನ ಜಮೀನಿನ ಸರ್ವೆ ನಂ. 12/7, 4/1 ಎ ಆಗಿದ್ದು, ಸದರಿ ಜಮೀನುಗಳು ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಸದರಿ ಜಮೀನುಗಳು ನನ್ನದು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆದರೆ ದೊಡ್ಡನಾಗನಾಯ್ಕ ನನ್ನ ತಾತ. ಆತ ನನನ್ನ ತಾತ ಎಂದು ತೋರಿಸಲು ನಾನು ಈವರೆಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ, ಆದರೆ ಮುಂದಿನ ಹಂತದಲ್ಲಿ ವಂಶವೃಕ್ಷವನ್ನು ಹಾಜರುಪಡಿಸುತ್ತೇನೆ. ನನಗೂ ಈ ನಿ.ಪಿ.1 ಮತ್ತು 2 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.07.25 10:30:49 +0530

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ದಾವಣಗೆರೆ.